

ಬೆಂಗಳೂರಿನ ದ್ಯಾವಸಂದ್ರ ಕೈಗಾರಿಕಾ ಪ್ರದೇಶದ ಹದಗೆಟ್ಟ ರಸ್ತೆಯಲ್ಲಿ ನೀರು ನಿಂತಿರುವ ದೃಶ್ಯ. -ಪ್ರಜಾವಾಣಿ ಚಿತ್ರ.



ಅಪರೂಪದ ಕಣ್ಣಿನ ಶಸ್ತ್ರ ಚಿಕಿತ್ಸೆಗೆ ಒಳಗಾದ ಮಗು.

# ಅಪರೂಪದ ಶಸ್ತ್ರ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಪ್ರತಿ ಕಣ್ಣಿನ ಆಸ್ಪತ್ರೆ ತಜ್ಞರು ನಗರದ ಭಾಗ್ಯಲಕ್ಷ್ಮಿ ಎಂಬುವವರ ನಾಲ್ಕು ತಿಂಗಳ ಮಗುವಿಗೆ ಅಪರೂಪದ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಶನಿವಾರ ಯಶಸ್ವಿಯಾಗಿ ಮಾಡಿದ್ದಾರೆ.

ಮಗುವಿನ ಎರಡೂ ಕಣ್ಣುಗಳ ಕ್ಯಾಟರ್ಯಾಕ್ಟ್ ಸಂಪೂರ್ಣ ವಿಫಲವಾಗಿರುವುದನ್ನು ಗುರುತಿಸಿದ ವೈದ್ಯ ಡಾ.ಸಂಪ್ರತಿ ಅವರು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸುವ ಪ್ರಯತ್ನಕ್ಕೆ ಮುಂದಾದರು.

ಈ ಶಸ್ತ್ರ ಚಿಕಿತ್ಸೆ ಬಹಳ ಕಠಿಣವಾಗಿದ್ದು, ಕೇವಲ ಪರಿಣಿತ ವೈದ್ಯರು ಮಾತ್ರ ಮಾಡಬಹುದಾಗಿದೆ. ಒಂದು ವಾರದ ನಂತರ ಕಣ್ಣಿಗೆ ಹಾಕಲಾಗಿರುವ ಬ್ಯಾಂಡೇಜ್ ತೆರೆದ ನಂತರ ಕಣ್ಣಿನ ಸ್ಥಿತಿ ಪರಿಶೀಲಿಸಿ ಕನ್ನಡಕ ಹಾಕಬೇಕೆ ಅಥವಾ ಬೇಡವೇ ಎಂಬುದನ್ನು ತಿಳಿಯಬಹುದು ಎಂದು ವೈದ್ಯ ಸಂಪ್ರತಿ ಹೇಳಿದ್ದಾರೆ.

ಸುಮಾರು 25000 ವೆಚ್ಚವಾಗುವ ಈ ಚಿಕಿತ್ಸೆಯನ್ನು ಉಚಿತವಾಗಿ ಮಾಡಿರುವುದು ವಿಶೇಷ. ಮಗುವಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ವೈದ್ಯರು ಹೇಳಿದಾಗ ಹೆದರಿದ್ದೆ. ಆದರೆ ಈಗ ಮಗು ಚೇತರಿಸಿಕೊಳ್ಳುವುದನ್ನು ನೋಡಿ ಧೈರ್ಯ ಬಂದಿದೆ ಎನ್ನುತ್ತಾರೆ ಮಗುವಿನ ತಾಯಿ ಭಾಗ್ಯಲಕ್ಷ್ಮಿ.